# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 523

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 13-12-2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಇಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ರಾಜ್ಯದಲ್ಲಿ ಒಟ್ಟು 62580 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.<br>ಒಟ್ಟು 3-6 ವರ್ಷದ 1394582 ಮಕ್ಕಳು ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿ ಕಲಿಯುತ್ತಿದ್ದಾರೆ. ಅಕ್ಟೋಬರ್ 2018 ರ ಪ್ರಗತಿ (ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ) |
| ಆ) | ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ಪ್ರಸ್ತುತ ರಾಜ್ಯದಲ್ಲಿ ಒಟ್ಟು 61025 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಸೇವೆ ಸಲ್ಲಿಸುತ್ತಿದ್ದಾರೆ. ವಿವರವನ್ನು ಅನುಬಂಧ-2 ರಲ್ಲಿ ಸಲ್ಲಿಸಿದೆ. ಅಕ್ಟೋಬರ್ 2018 ರ ಪ್ರಗತಿ (ಜಿಲ್ಲಾವಾರು ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ) |
| ಇ) | ಅಂಗನವಾಡಿ ಕಾರ್ಯಕರ್ತೆಯವರಿಗೆ ಸರ್ಕಾರ ನೀಡುತ್ತಿರುವ ಗೌರವಧನ ಎಷ್ಟು; ಗೌರವಧನ ಜೊತೆಗೆ ನೀಡುತ್ತಿರುವ ಇನ್ನಿತರೆ ಸೌಲಭ್ಯಗಳು ಯಾವುವು; | ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ.8000/- ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.4750/- ಪಾವತಿಸಲಾಗುತ್ತಿದೆ.<br>ಇನ್ನಿತರೆ ಸೌಲಭ್ಯಗಳ ವಿವರವನ್ನು ಅನುಬಂಧ-3 ರಲ್ಲಿ ಸಲ್ಲಿಸಿದೆ. |
| ಈ) | ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಗೌರವಧನ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು: ಸಮಯಕ್ಕೆ ಸರಿಯಾಗಿ ಗೌರವಧನ ಪಾವತಿಸಲು ಕೈಗೊಂಡಿರುವ ಕ್ರಮಗಳೇನು; | 2017-18ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಕ್ರಮವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.2000/- ಅಂಗನವಾಡಿ ಸಹಾಯಕಿಯರಿಗೆ ರೂ.1000/-ಗಳನ್ನು ಹೆಚ್ಚಿಸಿದ ಕಾರಣ ಹಾಗೂ ಕಡಿಮೆ ಅನುದಾನದ ಹಂಚಿಕೆಯಿಂದ ಕೊರತೆ ಉಂಟಾಗಿರುತ್ತದೆ.<br>ಪ್ರಸ್ತುತ 2018-19 ನೇ ಸಾಲಿನಲ್ಲಿ ಗೌರವಧನ ಪಾವತಿಗಾಗಿ ಮೊದಲ ಮೂರು ಕಂತುಗಳ ಅನುದಾನವನ್ನು ಹಾಗೂ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |
| ಉ) | ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಕುರಿತು ಸರ್ಕಾರದ ನಿಲುವೇನು? | ಐಸಿಡಿಎಸ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರವುದರಿಂದ ಕೇಂದ್ರ ಸರ್ಕಾರವು ಗೌರವಧನವನ್ನು ಹೆಚ್ಚಿಸಿದ ಸಂದರ್ಭದಲ್ಲಿ ಈ ಬಗ್ಗೆ ಕ್ರಮಕೈಗೊಳಲಾಗುವುದು |

ಸಂ:ಮಮಇ 341 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಶ್ರೀ. ಎನ್. ಅಪ್ಪಾಜಿಗೌಡ ವಿಧಾನ ಪರಿಷತ್ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.523ಕ್ಕೆ ಅನುಬಂಧ-1

| ಕ್ರ. ಸಂ. | ಜಿಲ್ಲೆಗಳು | ಮಂಜೂರಾದ ಅಂ.ಕೇಂ.ಸಂ. | ಮಂಜೂರಾದ ಮಿನಿ ಅಂ.ಕೇಂ.ಸಂ. | ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ/ಹಾಜರಾಗಿರುವ 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 2164 | 57 | 71477 |
| 2 | ಬೆಂಗಳೂರು(ಗ್ರಾ) | 1108 | 121 | 17434 |
| 3 | ರಾಮನಗರ | 1301 | 242 | 16758 |
| 4 | ಬೆಂಗಳೂರು(ನ) | 2329 | 91 | 46999 |
| 5 | ಬೆಳಗಾಂ | 5235 | 59 | 161415 |
| 6 | ಬಳ್ಳಾರಿ | 2345 | 48 | 73607 |
| 7 | ಬೀದರ್ | 1866 | 27 | 39740 |
| 8 | ವಿಜಯಪುರ | 2269 | 44 | 73846 |
| 9 | ಚಾಮರಾಜನಗರ | 1371 | 50 | 22500 |
| 10 | ಚಿಕ್ಕಮಗಳೂರು | 1667 | 158 | 21939 |
| 11 | ಚಿತ್ರದುರ್ಗ | 2208 | 116 | 45120 |
| 12 | ದಕ್ಷಿಣ ಕನ್ನಡ | 2084 | 20 | 37004 |
| 13 | ದಾವಣಗೆರೆ | 2026 | 86 | 47637 |
| 14 | ಧಾರವಾಡ | 1495 | 10 | 43449 |
| 15 | ಗದಗ | 1162 | 4 | 33554 |
| 16 | ಗುಲ್ಬರ್ಗ | 3025 | 73 | 72590 |
| 17 | ಯಾದಗಿರ್ | 1336 | 50 | 54612 |
| 18 | ಹಾಸನ | 2248 | 275 | 30108 |
| 19 | ಹಾವೇರಿ | 1891 | 27 | 50521 |
| 20 | ಕೊಡಗು | 848 | 23 | 8359 |
| 21 | ಕೋಲಾರ | 1980 | 81 | 27920 |
| 22 | ಚಿಕ್ಕಬಳ್ಳಾಪುರ | 1848 | 113 | 24254 |
| 23 | ಕೊಪ್ಪಳ | 1800 | 50 | 65261 |
| 24 | ಮಂಡ್ಯ | 2240 | 306 | 27694 |
| 25 | ಮೈಸೂರು | 2691 | 169 | 44250 |
| 26 | ರಾಯಚೂರು | 2621 | 41 | 83089 |
| 27 | ಶಿವಮೊಗ್ಗ | 2125 | 314 | 37888 |
| 28 | ತುಮಕೂರು | 3576 | 519 | 56464 |
| 29 | ಉಡುಪಿ | 1191 | 0 | 19653 |
| 30 | ಉತ್ತರಕನ್ನಡ | 2530 | 157 | 39440 |
| ರಾಜ್ಯದ ಒಟ್ಟು | | **62580** | **3331** | **1394582** |

ಶ್ರೀ. ಎನ್. ಅಪ್ಪಾಜಿಗೌಡ ವಿಧಾನ ಪರಿಷತ್ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.523ಕ್ಕೆ ಅನುಬಂಧ-2

| ಕ್ರ. ಸಂ. | ಜಿಲ್ಲೆಗಳು | ಮಂಜೂರಾದ ಅಂಗನವಾಡಿ ಕಾರ್ಯಕರ್ತೆಯರು | | ಮಂಜೂರಾದ ಮಿನಿ ಅಂಗನವಾಡಿ ಕಾರ್ಯಕರ್ತೆಯರು | |
|---|---|---|---|---|---|
| | | ಸಂಖ್ಯೆ | ಭರ್ತಿ | ಸಂಖ್ಯೆ | ಭರ್ತಿ |
| 1 | ಬಾಗಲಕೋಟೆ | 2164 | 2107 | 57 | 57 |
| 2 | ಬೆಂಗಳೂರು(ಗ್ರಾ) | 1108 | 1101 | 121 | 121 |
| 3 | ರಾಮನಗರ | 1301 | 1243 | 242 | 242 |
| 4 | ಬೆಂಗಳೂರು(ನ) | 2329 | 2291 | 91 | 91 |
| 5 | ಬೆಳಗಾಂ | 5235 | 5090 | 59 | 59 |
| 6 | ಬಳ್ಳಾರಿ | 2345 | 2304 | 48 | 48 |
| 7 | ಬೀದರ್ | 1866 | 1743 | 27 | 27 |
| 8 | ವಿಜಯಪುರ | 2269 | 2198 | 44 | 44 |
| 9 | ಚಾಮರಾಜನಗರ | 1371 | 1313 | 50 | 50 |
| 10 | ಚಿಕ್ಕಮಗಳೂರು | 1667 | 1622 | 158 | 158 |
| 11 | ಚಿತ್ರದುರ್ಗ | 2208 | 2172 | 116 | 116 |
| 12 | ದಕ್ಷಿಣ ಕನ್ನಡ | 2084 | 2059 | 20 | 20 |
| 13 | ದಾವಣಗೆರೆ | 2026 | 1984 | 86 | 86 |
| 14 | ಧಾರವಾಡ | 1495 | 1460 | 10 | 10 |
| 15 | ಗದಗ | 1162 | 1108 | 4 | 4 |
| 16 | ಗುಲ್ಬರ್ಗ | 3025 | 2924 | 73 | 73 |
| 17 | ಯಾದಿಗಿರ್ | 1336 | 1306 | 50 | 50 |
| 18 | ಹಾಸನ | 2248 | 2205 | 275 | 275 |
| 19 | ಹಾವೇರಿ | 1891 | 1845 | 27 | 27 |
| 20 | ಕೊಡಗು | 848 | 810 | 23 | 23 |
| 21 | ಕೋಲಾರ | 1980 | 1895 | 81 | 81 |
| 22 | ಚಿಕ್ಕಬಳ್ಳಾಪುರ | 1848 | 1818 | 113 | 113 |
| 23 | ಕೊಪ್ಪಳ | 1800 | 1764 | 50 | 50 |
| 24 | ಮಂಡ್ಯ | 2240 | 2168 | 306 | 306 |
| 25 | ಮೈಸೂರು | 2691 | 2637 | 169 | 169 |
| 26 | ರಾಯಚೂರು | 2621 | 2565 | 41 | 41 |
| 27 | ಶಿವಮೊಗ್ಗ | 2125 | 2096 | 314 | 314 |
| 28 | ತುಮಕೂರು | 3576 | 3535 | 519 | 519 |
| 29 | ಉಡುಪಿ | 1191 | 1172 | 0 | 0 |
| 30 | ಉತ್ತರಕನ್ನಡ | 2530 | 2490 | 157 | 157 |
| ರಾಜ್ಯದ ಒಟ್ಟು | | 62580 | 61025 | 3331 | 3331 |

ಶ್ರೀ. ಎನ್. ಅಪ್ಪಾಜಿಗೌಡ ವಿಧಾನ ಪರಿಷತ್ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.523ಕ್ಕೆ
ಅನುಬಂಧ 3

ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನದೊಂದಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಇನ್ನಿತರ ಸೌಲಭ್ಯಗಳ ವಿವರ

**ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ;**

- ಅಂಗನವಾಡಿ ಕಾರ್ಯಕರ್ತೆ/ಸಹಯಕಿಯರಿಗೆ ಕೇಂದ್ರ ಸರ್ಕಾರದ ವತಿಯಿಂದ ಪ್ರತಿ ಸಮವಸ್ತ್ರಕ್ಕೆ ರೂ.400/- ಮೌಲ್ಯದಂತೆ ವರ್ಷಕ್ಕೆ 2 ಜೊತೆ ಸಮವಸ್ತ್ರಗಳನ್ನು ನೀಡಲಾಗುತ್ತಿದೆ.
- 6 ತಿಂಗಳ ಗೌರವಧನ ಸಹಿತ ಹೆರಿಗೆ ರಜೆ, ವಾರ್ಷಿಕ 20 ದಿನಗಳ ಸಾದರ್ಭಿಕ ರಜೆ ಹಾಗೂ ಅನಾರೋಗ್ಯದ ಸಂದರ್ಭದಲ್ಲಿ 10 ದಿನಗಳ ರಜೆಯನ್ನು ಒಟ್ಟಿಗೆ ಉಪಯೋಗಿಸಬಹುದಾಗಿರುತ್ತದೆ. ಇದಲ್ಲದೆ ಪ್ರತಿ ವರ್ಷದ ಮೇ ಮಾಹೆಯಲ್ಲಿ 15 ದಿನಗಳ ಬೇಸಿಗೆ ರಜೆ ನೀಡಲಾಗುತ್ತಿದೆ.
- ಅಂಗನವಾಡಿ ಕಾರ್ಯಕರ್ತೆಯರನ್ನು ಸಹ ಈ ಯೋಜನೆಯ ಫಲಾನುಭವಿಗಳೆಂದು ಪರಿಗಣಿಸಿ ದಿನಕ್ಕೆ ರೂ.9.50/- ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ತಿಂಗಳಲ್ಲಿ 25 ದಿನ ನೀಡಲಾಗುತ್ತಿದೆ.
- ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರ ವಾರಸುದಾರರಿಗೆ ನೀಡಲಾಗುತ್ತಿದ್ದ ಮರಣಪರಿಹಾರ ಮೊತ್ತವನ್ನು ದಿನಾಂಕ:01.09.2014 ರಿಂದ ರೂ.20,000/- ಗಳಿಂದ ರೂ.50,000/- ಗಳಿಗೆ ಹೆಚ್ಚಿಸಲಾಗಿದೆ.
- ಅಂಗನವಾಡಿ ಕಾರ್ಯಕರ್ತೆಯು ಸೇವೆಯಲ್ಲಿರುವಾಗ ತೀವ್ರತರವಾದ ಕಾಯಿಲೆಗಳಿಗೆ ಗುರಿಯಾಗಿ ಚಿಕಿತ್ಸೆಗೊಳಗಾದ ಸಂದರ್ಭದಲ್ಲಿ, ನೀಡಲಾಗುತ್ತಿದ್ದ ವೈದ್ಯಕೀಯ ವೆಚ್ಚ ಮರುಪಾವತಿಯ ಗರಿಷ್ಠ ಮೊತ್ತವನ್ನು ದಿನಾಂಕ: 14.03.2017 ರಿಂದ, ರೂ.20,000/- ರಿಂದ ರೂ.50,000/- ಗಳಿಗೆ ಹೆಚ್ಚಿಸಲಾಗಿದೆ.
- ಅಂಗನವಾಡಿ ಕಾರ್ಯಕರ್ತೆ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಸಂದರ್ಭದಲ್ಲಿ ಅವರ ಅಂತ್ಯಕ್ರಿಯೆಗಾಗಿ ಮರಣ ಪರಿಹಾರವಾಗಿ ನೀಡುತ್ತಿದ್ದ ಮುಂಗಡ ಮೊತ್ತವನ್ನು ದಿನಾಂಕ: 14.3.2017 ರಿಂದ ರೂ.1,000/- ಗಳಿಂದ ರೂ.5,000/- ಕ್ಕೆ ಹೆಚ್ಚಿಸಲಾಗಿದೆ.
- ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ವಂತಿಗೆ ಆಧಾರಿತ ನಿವೃತ್ತಿ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. (ಎನ್.ಪಿ.ಎಸ್. ಲೈಟ್) ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ನಿಗಧಿಗೊಳಿಸಿದ್ದು ಅಂಗನವಾಡಿ ಕಾರ್ಯಕರ್ತೆಯರು ಪ್ರತಿ ಮಾಹೆಯಲ್ಲಿ ಸ್ವೀಕರಿಸುವ ಗೌರವಧನದಲ್ಲಿ ರೂ.150/- ಅವರ ವಂತಿಗೆಯಾಗಿ ಭರಿಸುತ್ತಿದ್ದು, ಸಮಪಾಲು ವಂತಿಗೆಯನ್ನು ರಾಜ್ಯ ಸರ್ಕಾರವು ಸಹ ಭರಿಸುತ್ತಿದೆ.
- ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಸ್ಥಳೀಯವಾಗಿ ವಾಸ ಇತ್ಯಾದಿ ಆಯ್ಕೆ ಮಾರ್ಗಸೂಚಿಯನ್ವಯ ಎಲ್ಲಾ ಷರತ್ತುಗಳನ್ನು ಪೂರೈಸಿದಲ್ಲಿ, ಸೇವೆಯಲ್ಲಿರುವಾಗಲೇ ಮರಣಹೊಂದುವ ಅಂಗನವಾಡಿ ಕಾರ್ಯಕರ್ತೆಯ ಅವಿವಾಹಿತ ಮಗಳನ್ನು ಮೃತ ತಾಯಿಯು ನಿರ್ವಹಿಸುತ್ತಿದ್ದ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ದಿ:02.07.2016 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.
- ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ-ಬಾಣಂತಿಯರಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಸಹ ಫಲಾನುಭವಿಗಳೆಂದು ಪರಿಗಣಿಸಿ ದಿನಕ್ಕೆ ರೂ.11.50/- ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ಬಿಸಿಯೂಟದೊಂದಿಗೆ ತಿಂಗಳಲ್ಲಿ 25 ದಿನ ನೀಡಲಾಗುತ್ತಿದೆ.